**ಓಂ ಶಾಂತಿ, ಬಾಪ್ ದಾದಾ. ಅವ್ಯಕ್ತ ಮುರಳಿ 17-04-1969.**

(ओम शान्ति, बापदादा. अव्यक्त मुरली 17-04-1969).

***ಅಬು 'ಆಧ್ಯಾತ್ಮಿಕ ಸಂಗ್ರಹಾಲಯದ' ಪ್ರಾರಂಭೋತ್ಸವ*** (आबू 'आध्यात्मिक संग्रहालय' का उद्घाटन)

ಸರ್ವಸ್ನೆಹಿ ಮಕ್ಕಳಿಗೆ ತಂದೆಯ ನಮಸ್ತೆ. ನಿಮ್ಮ ಸ್ನೇಹ ಯಾರೊಂದಿಗಿದೆ? (ಕೆಲವರು ಬಾಬನೊಂದಿಗೆ ಎಂದು ಹೇಳಿದರು, ಕೆಲವರು ಸೇವೆಯೊಂದಿಗೆ ಎಂದು ಹೇಳಿದರು) ಇನ್ನು ಯಾವುದರೊಂದಿಗೆ ಸ್ನೇಹವಿದೆ? ಈಗಲೂ ಒಂದು ವಿಷಯ ಉಳಿದು ಹೋಗಿದೆ. ಬಾಪ್ ದಾದರವರೊಂದಿಗೆ ಸ್ನೇಹವಂತೂ ಇದೆ. ಆದರೆ ಜೊತೆ-ಜೊತೆಗೆ ಪುರುಷಾರ್ಥದೊಂದಿಗೆ ಕೂಡ ಬಹಳಷ್ಟು ಸ್ನೇಹವನ್ನು ಇಟ್ಟುಕೊಳ್ಳಬೇಕು. ದೈವಿ ಪರಿವಾರದೊಂದಿಗೆ, ಸೇವೆಯೊಂದಿಗೆ, ಬಾಪ್ ದಾದಾರವರೂಂದಿಗೆ ಸ್ನೇಹ, ಇದಂತೂ ಇದೆ. ಆದರೆ ವರ್ತಮಾನ ಸಮಯ ಪುರುಷಾರ್ಥದೊಂದಿಗೆ ಹೆಚ್ಚು ಸ್ನೇಹವನ್ನು ಇಟ್ಟುಕೊಳ್ಳಬೇಕು. ಯಾರಾದರೆ ಪುರುಷಾರ್ಥದ ಸ್ನೇಹಿತರೋ ಅವರು ಎಲ್ಲರಿಗೂ ಸ್ನೇಹಿತರು. ಪ್ರತಿಯೊಬ್ಬರಿಗೆ ಪುರುಷಾರ್ಥದ ಮೇಲೆ ಎಷ್ಟು ಸ್ನೇಹವಿದೆ ಎಂಬುವುದನ್ನು ಪ್ರತಿಯೊಬ್ಬರೂ ಪರಿಶೀಲಿಸಿಕೊಳ್ಳಬೇಕು. ಬಾಪ್ ದಾದಾರವರೊಂದಿಗೆ ಕೂಡ ಸ್ನೇಹ ಯಾವುದಕ್ಕಾಗಿ ಎಂದರೆ ಅವರು ಪುರುಷಾರ್ಥ ಮಾಡಿಸುತ್ತಾರೆ. ಪುರುಷಾರ್ಥದೊಂದಿಗೆ ಸ್ನೇಹ ಇದ್ದಾಗಲೇ ಪ್ರಾಪ್ತಿಯೊಂದಿಗೆ ಸ್ನೇಹವಿರುತ್ತದೆ. ಪುರುಷಾರ್ಥದ ಮೇಲೆ ಸ್ನೇಹ ಇಲ್ಲದೆ ಇರುವವರೆಗೆ ದೈವಿ ಪರಿವಾರದ ಸ್ನೇಹ ತೆಗೆದುಕೊಳ್ಳಲಾಗುವುದಿಲ್ಲ ಮತ್ತು ಕೊಡಲೂ ಆಗುವುದಿಲ್ಲ. ಒಂದು ವೇಳೆ ಪುರುಷಾರ್ಥದೊಂದಿಗೆ ಸ್ನೇಹವಿದ್ದರೆ ಒಬ್ಬರ ಸ್ನೇಹಕ್ಕೆ ಇನ್ನೊಬ್ಬರು ಪಾತ್ರರಾಗುತ್ತಾರೆ. ಸ್ನೇಹದ ಕಾರಣದಿಂದಲೇ ಎಲ್ಲರೂ ಇಲ್ಲಿ ಒಟ್ಟಿಗೆ(ಜೊತೆಯಾಗಿ) ಇರುವಿರಿ. ಆದರೆ ಎಲ್ಲರೂ ಬಾಪ್ ದಾದ ರವರ ಸ್ನೇಹದಲ್ಲಿ ಇರುತ್ತಿದ್ದೀರಿ. **ಈಗ ಪುರುಷಾರ್ಥದೊಂದಿಗೆ ಕೂಡ ಸ್ನೇಹವನ್ನು ಇಟ್ಟುಕೊಳ್ಳಬೇಕು ಏಕೆಂದರೆ ಈ ಪುರುಷಾರ್ಥವೇ ಮಕ್ಕಳಾದ ನಿಮಗೆ ಇಡೀ ಕಲ್ಪದ ಪ್ರಾಪ್ತಿಯನ್ನು(ಪ್ರಾಲಬ್ಧವನ್ನು) ತಯಾರು ಮಾಡುತ್ತದೆ**.

ಎಷ್ಟು ಮಕ್ಕಳಿಗೆ ಸ್ನೇಹವಿದೆಯೋ ಅದಕ್ಕಿಂತ ಹೆಚ್ಚು ಸ್ನೇಹ ಬಾಪ್ ದಾದಾರವರಿಗೆ ಕೂಡ ಇದೆ. ಏಕೆಂದರೆ ಯಾರು ಎಷ್ಟು ಸ್ನೇಹಿ ಆಗುತ್ತಾರೆಯೋ ಅವರಿಗೆ ಅಷ್ಟು ಸ್ನೇಹದ ಪ್ರತಿಕ್ರಿಯೆ ಸಿಗುತ್ತದೆ. ಅವ್ಯಕ್ತ ಸ್ನೇಹದ ಪಾಠವನ್ನು ಎಲ್ಲಿಯವರೆಗೆ ಕಲಿತಿರುವಿರಿ? ವರ್ತಮಾನ ಸಮಯದ ಪಾಠವೇ ಇದಾಗಿದೆ. ಅವ್ಯಕ್ತ ರೂಪದಲ್ಲಿ ಸ್ನೇಹವನ್ನು ತೆಗೆದುಕೊಳ್ಳಬೇಕು ಮತ್ತು ಸ್ನೇಹದೊಂದಿಗೆ ಸೇವೆಯ ಪ್ರತ್ಯಕ್ಷತೆಯನ್ನು ಕೊಡಬೇಕು. ಈಗ ಅವ್ಯಕ್ತ ಸ್ನೇಹದ ಪಾಠವನ್ನು ಎಲ್ಲಿಯವರೆಗೆ ಪಕ್ಕಾ ಮಾಡಿಕೊಂಡಿರುವಿರಿ. ಈಗ ಫಲಿತಾಂಶ ಹೇಗಿದೆ ಎಂದು ಭಾವಿಸುತ್ತಿರುವಿರಿ? ಅರ್ಧದವರೆಗೆ ಬಂದಿದ್ದೀರಾ? ಬಹುಸಂಖ್ಯಾತರ ಫಲಿತಾಂಶವನ್ನು ಕೇಳುತ್ತಿದ್ದಾರೆ. ಕೆಲವರು 25%, ಕೆಲವರು 75% ಎಂದು ಹೇಳಿದರು ಎಷ್ಟು ವ್ಯತ್ಯಾಸವಿದೆ ಬಹಳಷ್ಟರಮಟ್ಟಿಗೆ 25% ಎಂದು ಭಾವಿಸುತ್ತಿದ್ದಾರೆ. ಇಂತಹ ಫಲಿತಾಂಶ ಏಕೆ ಬಂದಿತು? ಇದರ ಕಾರಣವೇನು? 25% ರಷ್ಟು ಅವ್ಯಕ್ತ ಸ್ನೇಹವಿದ್ದರೆ ಉಳಿದ 75% ರಷ್ಟು ಯಾವುದರೊಂದಿಗೆ ಸ್ನೇಹವಿದೆ. ಬಹುಸಂಖ್ಯಾತರ ಫಲಿತಾಂಶ 25% ರಷ್ಟಿದೆ. ಹಾಗಾದರೆ ಮುಂಬರುವ ಭವಿಷ್ಯ ಸಮಯದಲ್ಲಿ ಉತ್ತೀರ್ಣರಾಗುವ ಫಲಿತಾಂಶ ಹೇಗೆ ಇರುತ್ತದೆ? ಈಗ ಅವ್ಯಕ್ತ ಸ್ನೇಹ ಬಹಳ ಮುಖ್ಯವಾಗಿದೆ. ಅವ್ಯಕ್ತ ಸ್ನೇಹವೇ ನೆನಪಿನ ಯಾತ್ರೆಗೆ ಬಲವನ್ನು ಕೊಡುತ್ತದೆ. ಅವ್ಯಕ್ತ ಸ್ನೇಹವೇ ಅವ್ಯಕ್ತ ಸ್ಥಿತಿಯನ್ನು ತಯಾರು ಮಾಡಲು ಸಹಾಯಮಾಡುತ್ತದೆ. 25% ರಷ್ಟು ಈ ಫಲಿತಾಂಶ ಏಕೆ? ಕಾರಣವನ್ನು ಯೋಚಿಸಿರಿ. ಸಮಯದ ಅನುಸಾರ ಈಗಿನವರೆಗೆ ಈ ಫಲಿತಾಂಶ ಇರಬಾರದು. ಸಮಯಾನುಸಾರ ಈಗ 75% ರಷ್ಟು ಇರಬೇಕು ಮತ್ತೆ ಈ ರೀತಿಯ ಫಲಿತಾಂಶ ಬರಲು ಏನು ಮಾಡುವಿರಿ? ಅದಕ್ಕಾಗಿ ಇರುವ ಪದ್ಧತಿ ಏನು? (ಅಂತರ್ಮುಖತೆ) ಅಂತರ್ಮುಖಿಯಾಗಬೇಕು ಎಂದು ಸದಾ ಹೇಳುತ್ತೀರಿ. ಆದರೆ ಆಗದೇ ಇರುವುದಕ್ಕಾಗಿ ಕಾರಣಗಳೇನು? .

ಬಾಪ್ ದಾದಾರವರೊಂದಿಗೆ, ಸೇವೆಯೊಂದಿಗೆ, ಸ್ನೇಹವಂತೂ ಇದೆ. ಆದರೆ ಪುರುಷಾರ್ಥದೊಂದಿಗೆ ಕಡಿಮೆ ಇದೆ. ಏಕೆ ಕಡಿಮೆ ಇದೆ? ಇದಕ್ಕೆ ಕಾರಣವಂತೂ ಇದೇ ಕಾಣಿಸುತ್ತಿದೆ. ಬಹಳಷ್ಟು ಜನರು ಪರಿಸ್ಥಿತಿಗಳನ್ನು ನೋಡಿ ಗೊಂದಲಕ್ಕೆ ಒಳಗಾಗುತ್ತಿದ್ದಾರೆ. ಪರಿಸ್ಥಿತಿಗಳ ಆಧಾರದಿಂದ ಸ್ಥಿತಿಯನ್ನು ತಯಾರು ಮಾಡಿಕೊಳ್ಳುತ್ತಿದ್ದಾರೆ. ಸ್ಥಿತಿಯಿಂದ ಪರಿಸ್ಥಿತಿಗಳನ್ನು ಬದಲಾಯಿಸುತ್ತಿಲ್ಲ. ಪರಿಸ್ಥಿತಿ ಬದಲಾದಾಗ ಸ್ಥಿತಿ ಇರುತ್ತದೆ ಎಂದು ಭಾವಿಸುತ್ತಿದ್ದಾರೆ. ಆದರೆ ಸ್ವಸ್ಥಿತಿಯ ಶಕ್ತಿ ಇರುವಾಗಲೇ ಪರಿಸ್ಥಿತಿಗಳು ಬದಲಾಗುತ್ತವೆ. ಅದು ಪರಿಸ್ಥಿತಿ, ಇದು ಸ್ವಸ್ಥಿತಿ ಪರಿಸ್ಥಿತಿಯೊಳಗೆ ಬಂದುಬಿಡುವುದರಿಂದ ಬಲಹೀನತೆಯೊಳಗೆ ಬಂದುಬಿಡುತ್ತಿದ್ದೀರಿ. ಸ್ವಸ್ಥಿತಿಯಲ್ಲಿ ಇರುವುದರಿಂದ ಶಕ್ತಿ ಬರುತ್ತದೆ. ಪರಿಸ್ಥಿತಿಯಲ್ಲಿ ಬಂದು ನಿಂತು ಹೋಗಬಾರದು. ಸ್ವಸ್ಥಿತಿಯಲ್ಲಿ ಯುದ್ಧಮಾಡುವ ಶಕ್ತಿ ಇರುತ್ತದೆ. ಸ್ವಸ್ಥಿತಿಯು ಬಲಹೀನವಾಗಿ ಇರುವ ಕಾರಣ ಅಲ್ಲಲ್ಲಿ ಪರಿಸ್ಥಿತಿಗಳು ಶಕ್ತಿಶಾಲಿಯಾಗಿ ಆಗುತ್ತಿವೆ.

ಬಹಳಷ್ಟು ಮಕ್ಕಳು ಇದೇ ಹೇಳುತ್ತಿದ್ದಾರೆ. "ಬಾಬಾ ಈ ವಿಷಯವನ್ನು ಸರಿಪಡಿಸಿದರೆ ನಾವು ಹೀಗೆ ತಯಾರಾಗುತ್ತೇವೆ ಎಂದು. ಈ ವಿಷಯ ವಿಘ್ನವಾಗಿ ಇದೆ ಎಂದು ಹೇಳುತ್ತಾರೆ". **ಧೈರ್ಯದಿಂದ ಈ ಪರಿಸ್ಥಿತಿಯನ್ನು ದಾಟಿ ತೋರಿಸುತ್ತೇವೆ ಎಂಬುವವರು  ವಿರಳವಾಗಿದ್ದಾರೆ**. ಆಸೆಗಳನ್ನು ಇಡುತ್ತೀರಿ, ಇದು ಒಳ್ಳೆಯದೇ ಆದರೆ ಆಸೆಯಿಂದ ಪ್ರಾಪ್ತಿಯಾದ ಶಿಕ್ಷಣವನ್ನು ಸ್ವರೂಪದಲ್ಲಿ ತರುತ್ತಿಲ್ಲ. ಎಲ್ಲರ ಅರ್ಜಿ(ಆಸೆ)ಗಳ ಫೈಲ್ ಬಹಳ ದೊಡ್ಡದಾಗಿ ಇದೆ. ಧರ್ಮರಾಜನ ಲೆಕ್ಕಾಚಾರಗಳ ಖಾತೆ ಇರುತ್ತದೆ ತಾನೇ, ಹಾಗೆಯೇ ವರ್ತಮಾನ ಸಮಯದಲ್ಲಿ ಬಾಪ್ ದಾದರವರ ಹತ್ತಿರ ಮಕ್ಕಳ ಆಸೆಗಳು ಬಹಳಷ್ಟಿವೆ. ಪ್ರತಿಯೊಬ್ಬರ ಫೈಲ್ ಇದೆ. ಮುಖ್ಯ ವಿಷಯ ಹೇಳಿದ್ದೆ-ಪುರುಷಾರ್ಥದ ಮೇಲೆ ಸ್ನೇಹವನ್ನು ಇಡಬೇಕು ನಿಮ್ಮನ್ನು ನೀವು ಏನೆಂದು ಕರೆಯುತ್ತೀರಿ? ಪುರುಷಾರ್ಥಿ, ನೀವು ಪುರುಷಾರ್ತಿಗಳು. ಆದರೆ ಪುರುಷಾರ್ಥದ ಬಗ್ಗೆ ತಿಳಿದುಕೊಳ್ಳುತ್ತಿಲ್ಲ. ನಿಮ್ಮ ಫೈಲ್ ನ ಬಗ್ಗೆ ತಿಳಿದಿದೆಯೇ? ನಿಮ್ಮ ಪುರುಷಾರ್ಥ ಏನು ಎಂದು ತಿಳಿದಿದೆಯೇ? ಸಾಕಾರ ರೂಪದಲ್ಲಿ ಅಂತಿಮ ಸ್ಥಿತಿಯನ್ನು ನೋಡಿರುವಿರಿ ತಾನೆ. ಸಾಕಾರ ರೂಪದಲ್ಲಿ ಕರ್ಮಮಾಡಿ ತೋರಿಸಿದಾಗ ಅಂತಿಮ ಸ್ಥಿತಿ ತಿಳಿಯಿತು ತಾನೆ? *ಅಂತಿಮ ಸ್ಥಿತಿಯ ಪ್ರಕಾರ ಯಾವ ಲೋಪ ಕಾಣಿಸುತ್ತದೆಯೋ ಆ ಲೋಪವನ್ನು ತಕ್ಷಣವೇ ತೊಲಗಿಸಿಕೊಳ್ಳುವುದೇ ಪುರುಷಾರ್ಥದ ಮೇಲೆ ಪ್ರೀತಿಯನ್ನು ಇಟ್ಟುಕೊಳ್ಳುವುದಾಗಿದೆ* . ನಿಧಾನವಾಗಿ ಮಾಡುವುದಲ್ಲ. ಸಾಕಾರ ಬ್ರಹ್ಮ ಬಾಬಾರವರಲ್ಲಿ ಒಂದು ವಿಷಯ ಮುಖ್ಯವಾಗಿ ಇತ್ತು. ಯಾವ ವಿಷಯವನ್ನಾದರೂ ನಂತರ ಎಂದು ಬಿಡಲಿಲ್ಲ, ಈಗಲೇ ಮಾಡಬೇಕು ಎಂದು ಹೇಳುತ್ತಿದ್ದರು. ಹೇಗಾದರೆ ಬಾಬಾ "ಆಗಲೇ" ಮಾಡುತ್ತಿದ್ದರೊ ಹಾಗೆಯೇ "ಈಗಲೇ" ಮಾಡಬೇಕು. 10-15 ದಿನಗಳ ನಂತರ ಮಾಡುತ್ತೇವೆ ಎಂದು ಹೇಳಬಾರದು. ಹತ್ತು ಹದಿನೈದು ದಿನಗಳ ನಂತರ ಮಾಡುತ್ತೇವೆ, ಮಧುಬನಕ್ಕೆ ಹೋಗಿ ಅಂತಿಮ ಸ್ಥಿತಿಯನ್ನು ಅಭ್ಯಾಸ ಮಾಡುತ್ತೇವೆ-ಹೀಗೆ ಬಹಳಷ್ಟು ಕಾಯುತ್ತಿದ್ದಾರೆ. ತಯಾರಾಗುವುದನ್ನು ಮರೆತು ಹೋಗುತ್ತಿದ್ದಾರೆ. ತಯಾರಾಗುತ್ತಿಲ್ಲ. ವಿಷಯಗಳ ಸಲುವಾಗಿ ಬಹಳಷ್ಟು ಕಾಯ್ದು ನೋಡುತ್ತಿದ್ದಾರೆ. ನಿರೀಕ್ಷಣೆಯನ್ನು ಬಿಟ್ಟು ತಯಾರಾಗುವುದರಲ್ಲಿ ನಿಮಗ್ನವಾಗಬೇಕು ಆಗ ಫಲಿತಾಂಶ 75% ಆಗಿಬಿಡುತ್ತದೆ.

ವರ್ತಮಾನ ಸಮಯದಲ್ಲಿ ಪುರುಷಾರ್ಥ 75% ಕ್ಕಿಂತ ಕಡಿಮೆ ಆಗಬಾರದು. ಕಾರಣ ಕೂಡ ಹೇಳುತ್ತಿದ್ದೇನೆ - ಕೆಲವರು ಸಮಯದ ಸಲುವಾಗಿ, ಅಥವಾ ಸಮಸ್ಯೆಗಳ ಸಲುವಾಗಿ, ಅಥವಾ ಸಂಬಂಧಿಗಳ ಸಲುವಾಗಿ ಅಥವಾ ಶರೀರದ ಸಲುವಾಗಿ ಯೋಚಿಸುತ್ತಿದ್ದಾರೆ. ಆದರೆ ಏನಿದೆಯೋ,  ಏನು ಎದುರಿಗೆ ಬಂದಾಗಲೂ ಅಂತಹ ಪರಿಸ್ಥಿತಿಗಳಲ್ಲಿ ಇರುತ್ತಿದ್ದಾಗಲೇ, ಮತ್ತು ಈ ಶರೀರ ಇದ್ದಾಗಲೇ ನಾವು ಸಂಪೂರ್ಣರಾಗಬೇಕು- ಎಂಬ ಲಕ್ಷ್ಯವನ್ನು ಇಡಿ. ಈಗ ಯಾವುದಾದರೊಂದು ಆಧಾರವನ್ನು ತೆಗೆದುಕೊಳ್ಳುತ್ತಿರುವ ಕಾರಣ ಅಧೀನವಾಗಿ ಬಿಡುತ್ತಿದ್ದೀರಿ. ವಿಷಯಗಳಿಗೆ ಅಧೀನವಾಗುತ್ತಿದ್ದೀರಿ. ಪ್ರತಿಯೊಬ್ಬರೂ ತಮ್ಮ ತಮ್ಮ ಕಥೆಯನ್ನು ಅಮೃತ ವೇಳೆ ಹೇಳುತ್ತಿರುತ್ತಾರೆ - ಕೆಲವರು ಶರೀರಕ್ಕೆ ರೋಗವಿಲ್ಲವಾದಾಗ ಬಹಳ ಪುರುಷಾರ್ಥ ಮಾಡುತ್ತೇವೆ ಎಂದು ಹೇಳುತ್ತಾರೆ. ಇನ್ನೂ ಕೆಲವರು ಬಂಧನಗಳನ್ನು ತೊಲಗಿಸಿದಾಗ ಎನ್ನುತ್ತಾರೆ. ಆದರೆ ಒಂದು ಬಂಧನ ತೊಲಗಿಸಿದಾಗ ಇನ್ನೊಂದು ಬಂಧನ ಬಂದುಬಿಡುತ್ತದೆ. ತನುವಿನ ಬಂಧನ ತೊಲಗಿಸಿದಾಗ ಮನಸ್ಸು ಅಥವಾ ಧನದ ಬಂಧನ ಅಥವಾ ಸಂಬಂಧದ ಬಂಧನ ಬರುತ್ತದೆ - ಆವಾಗ ಏನು ಮಾಡುತ್ತೀರಿ. ಇವುಗಳು ತಮ್ಮಷ್ಟಕ್ಕೆ ತಾವೇ ತೊಲಗುವುದಿಲ್ಲ ಅವುಗಳನ್ನು ನಿಮ್ಮ ಶಕ್ತಿಯಿಂದಲೇ ತೊಲಗಿಸಿಕೊಳ್ಳಬೇಕು. ಕೆಲವರು

ಬಾಪ್ ದಾದಾ ತೊಲಗಿಸುತ್ತಾರೆ ಅಥವಾ ಸಮಯಕ್ಕೆ ಅವೇ ತೊಲಗಿ ಹೋಗುತ್ತವೆ ಎಂದು ಭಾವಿಸುತ್ತಿದ್ದಾರೆ. ಆದರೆ ಆ ರೀತಿ ಭಾವಿಸಬಾರದು. ಈಗ ಸಮಯ ಸಮೀಪ ಬರುತ್ತಿದೆ. ಆದ್ದರಿಂದ ಒಂದು ವೇಳೆ ಬಲಹೀನ ಪುರುಷಾರ್ಥ ಇದ್ದರೆ ಈ ಪುರುಷಾರ್ಥದ ಸಮಯವನ್ನು ಕೈಯಾರೆ ಕಳೆದುಕೊಂಡ ಹಾಗೆ. ಈಗ ಒಂದೊಂದು ಕ್ಷಣ(ಸೆಕೆಂಡು) ಒಂದೊಂದು ಶ್ವಾಸ ಸಫಲ ಮಾಡಿಕೊಳ್ಳಬೇಕು. ಎಷ್ಟು ಶ್ವಾಸಗಳು ನಡೆಯುತ್ತಿವೆಯೋ ತಿಳಿದಿದೆಯಾ? ಲೆಕ್ಕವಿಲ್ಲದಷ್ಟು ತಾನೇ. ಆದ್ದರಿಂದ ಒಂದೊಂದು ಕ್ಷಣ, ಒಂದೊಂದು ಶ್ವಾಸ ಸಫಲವಾಗಬೇಕು. ಇದು ಇಂತಹ ಸಮಯವಾಗಿದೆ. ಒಂದು ವೇಳೆ ಯಾರಾದರೂ ನಿರ್ಲಕ್ಷ್ಯವಾಗಿ ಇದ್ದರೆ ಏನಾಗುತ್ತದೆ? ಹೇಗಾದರೆ ಕೆಲಮಕ್ಕಳು ಸಾಕಾರ ಮಧುರ ಮಿಲನದ ಸೌಭಾಗ್ಯವನ್ನು ಕೂಡ ಕಳೆದುಕೊಂಡಿದ್ದಾರೆಯೋ, ಹಾಗೆಯೇ ಪುರುಷಾರ್ಥವನ್ನು ಮಾಡಿಕೊಳ್ಳುವ ಸೌಭಾಗ್ಯ ಸಮಯ ಕೂಡ ಕೈಯಾರೆ ಕಳೆದುಕೂಳ್ಳುತ್ತೀರಿ. ಆದ್ದರಿಂದ ಮೊದಲೇ ಹೇಳುತ್ತಿದ್ದೇನೆ ಪುರುಷಾರ್ಥದೊಂದಿಗೆ ಸ್ನೇಹವನ್ನು ಇಟ್ಟುಕೊಂಡು ಪುರುಷಾರ್ಥವನ್ನು ಮಾಡಿಕೊಳ್ಳಿರಿ. ಮೇಲಿನಿಂದ ಆಟವನ್ನೆಲ್ಲಾ ನೋಡುತ್ತಿದ್ದೇನೆ. ನೀವು ಕೂಡ ಬಂದು ನೋಡಿದರೆ ಬಹಳ ಮಜಾ ಬರುತ್ತದೆ. ಮಕ್ಕಳು ಬಹಳ ರಮಣೀಯಕವಾದ ಆಟಗಳನ್ನು ಆಡುತ್ತಿದ್ದಾರೆ. ನೀವು ಕೂಡ ನೋಡಬಹುದು ನೀವು ಕೂಡ ಉನ್ನತ ಸ್ಥಿತಿಯಲ್ಲಿ ಸ್ಥಿತರಾಗಿ ನೋಡಿದರೆ ನಿಮ್ಮ ಜೊತೆ-ಜೊತೆಗೆ ಇತರರ ಆಟ ಕೂಡ ಕಾಣಿಸುತ್ತದೆ ಬಾಪ್ ದಾದ ಆದರೆ ನೋಡುತ್ತಿದ್ದಾರೆ. ನಗು ಬರುವ ಆಟವನ್ನು ಆಡುತ್ತಿದ್ದಾರೆ ದೊಡ್ಡ ದೊಡ್ಡ ಮಹಾರಥಿಗಳು ಸಿಂಹವನ್ನು ನೋಡಿ ಭಯಪಡುತ್ತಿಲ್ಲ, ಆದರೆ ಇರುವೆಯನ್ನು ನೋಡಿ ಭಯಪಡುತ್ತಿದ್ದಾರೆ. ಸಿಂಹವನ್ನು ಬಹಳ ಸಹಜವಾಗಿ ಎದುರಿಸುತ್ತಿದ್ದಾರೆ. ಆದರೆ ಇರುವೆಗಳಿಂದ ತಪ್ಪಿಸಿಕೊಳ್ಳುವ ಪದ್ಧತಿ ಬರುತ್ತಿಲ್ಲ. ಇದು ಮಹಾರಥಿಗಳ ಆಟ. ಕುದುರೆ ಸವಾರಿಗಳು (ಅಶ್ವದಳ) ಏನು ಮಾಡುತ್ತಿದ್ದಾರೆ ಗೊತ್ತೇ? ಕುದುರೆ ಸವಾರಿಗಳ ಆಟ ನೋಡುತ್ತಿದ್ದೇನೆ. ಮಹಾರಥಿಗಳ ಬಗ್ಗೆ ಹೇಳಿದ್ದೇನೆ, ಕುದುರೆ ಸವಾರಿಗಳಲ್ಲಿ ಧೈರ್ಯ-ಉತ್ಸಾಹ ಬಹಳ ಇವೆ. ಪುರುಷಾರ್ಥದಲ್ಲಿ ಹೆಜ್ಜೆಯನ್ನು ಮುಂದಕ್ಕೆ ಇಡುತ್ತಿದ್ದಾರೆ. ಮುಂದಕ್ಕೆ ಹೋಗುತ್ತಾ-ಹೋಗುತ್ತಾ ಜಾರುತ್ತಲೂ ಇಲ್ಲ ಅಥವಾ ತಡಬಡಿಸುತ್ತಿಲ್ಲ ಕೂಡ ಸುಸ್ತುಕೂಡ ಆಗುತ್ತಿಲ್ಲ, ದಣಿವರಿಯದವರು ಕೂಡ ಆಗಿದ್ದಾರೆ. ನಡೆಯುತ್ತಾರೆ ಕೂಡ ಬಹಳ ಚೆನ್ನಾಗಿದ್ದಾರೆ. ಆದರೆ ಮಾರ್ಗದಲ್ಲಿ ಬರುವ ದೃಶ್ಯಗಳಿಂದ ಆಕರ್ಷಿತರಾಗುತ್ತಾರೆ. ತಮ್ಮ ಪುರುಷಾರ್ಥವನ್ನು ಮುಂದುವರೆಸುತ್ತಿರುತ್ತಾರೆ. ಆದರೆ ನೋಡುವ ಸಂಸ್ಕಾರ ಬಹಳ ಇದೆ - ಅವರು ಏನು ಮಾಡುತ್ತಿದ್ದಾರೆ, ಅವರು ಹೇಗೆ ಮಾಡುತ್ತಿದ್ದಾರೆ, ನಾವು ಹಾಗೆ ಮಾಡೋಣ. ಏರುವಿಕೆಯಲ್ಲಿ ಇದ್ದಾರೆ. ಆದರೆ ಕುದುರೆ ಸವಾರರಲ್ಲಿ ನೋಡುವ ಮತ್ತು ಆಕರ್ಷಿತಗೊಳ್ಳು ಗುಣ ಬಹಳ ಇದೆ. ಕಾಲಾಳುಗಳದ್ದು ಒಂದು ನಗು ಬರುವ ಮಾತಿದೆ. ಆಟವನ್ನು ಹೇಳುತ್ತಿದ್ದೇನೆ ತಾನೇ. ಅವರೇನು ಮಾಡುತ್ತಾರೆ? ಇರುವ ವಿಷಯ ಬಹಳ ಸಣ್ಣದಾಗಿರುತ್ತದೆ. ಆದರೆ ಅದನ್ನು ಎಷ್ಟೋ ದೊಡ್ಡ ಪರ್ವತವನ್ನಾಗಿ ಮಾಡಿಬಿಡುತ್ತಾರೆ. ಪರ್ವತವನ್ನು ಹತ್ತಿಯನ್ನಾಗಿ ಅಲ್ಲ. ಹತ್ತಿಯನ್ನು ಪರ್ವತವನ್ನಾಗಿ ಮಾಡಿ ಅದರಲ್ಲಿ ತಾವೇ ತೊಂದರೆಗೊಳಗಾಗುತ್ತಾರೆ. ಅಲ್ಲಂತೂ ಏನೂ ಇರುವುದಿಲ್ಲ, ಅದನ್ನು ಬಹಳಷ್ಟು ದೊಡ್ಡದಾಗಿ ಮಾಡಿಬಿಡುತ್ತಾರೆ ಉನ್ನತ-ಉನ್ನತ ಎಂದು ಹೇಳುತ್ತಾ ಧೈರ್ಯಹೀನರಾಗಿ ಬಿಡುತ್ತಾರೆ. ಆದರೂ ವರ್ತಮಾನ ಸಮಯದಲ್ಲಿರುವ ಮೂರು ವಿಧವಾದ ಮಕ್ಕಳಲ್ಲಿ ಅರ್ಧದಷ್ಟು ತಮ್ಮನ್ನು ತಾವು ಬದಲಾಯಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಬಾಪ್ ದಾದಾರವರು ಹರ್ಷಿತರಾಗುತ್ತಿದ್ದಾರೆ. ಅವರ ಧೈರ್ಯ-ಉಲ್ಲಾಸ, ಹೆಜ್ಜೆಯನ್ನು ಮುಂದೆ ಇಡುವುದನ್ನು ನೋಡಿ ಒಂದು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಯಾರು ಮಹಾರಥಿ, ಯಾರು ಕುದುರೆ ಸವಾರರು ಮತ್ತು ಕಾಲ್ದಳದವರಾಗಿದ್ದೀರಿ ಎಂದು ಕೇಳಿದರೆ ಹೇಳಲಾಗುತ್ತದೆಯೇ? ಒಳ್ಳೆಯದು!

**ಅವ್ಯಕ್ತ ಮುರಳಿ 17-04-1969.**

**ಅಬು ಆಧ್ಯಾತ್ಮಿಕ ಗ್ರಂಥಾಲಯದ ಪ್ರಾರಂಭೋತ್ಸವ.**

ಆತ್ಮಿಕ ಸ್ಥಿತಿಯಲ್ಲಿ ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪುರುಷಾರ್ಥದೊಂದಿಗೆ ಸ್ನೇಹವನ್ನು ಇಟ್ಟುಕೊಂಡು ಇಡೀ ಕಲ್ಪಕ್ಕಾಗಿ ಪ್ರಾಪ್ತಿಯನ್ನು ತಯಾರು ಮಾಡಿಕೊಂಡಿದ್ದೇನೆ.

2. ನಾನು ಸೇವೆಯ ಪ್ರತ್ಯಕ್ಷತೆಯನ್ನು ಕೊಡುವ ಅವ್ಯಕ್ತ ಸ್ನೇಹ ಸ್ವರೂಪ.

3. ನಾನು ಸದಾ ಸ್ಮೃತಿಯಾತ್ರೆಯಲ್ಲಿ ಇರುವ ಅವ್ಯಕ್ತ ಸ್ನೇಹಿ.

4. ನಾನು ಅಂತರ್ಮುಖಿ ಸ್ವರೂಪ.

5. ನಾನು ಸ್ವಸ್ಥಿತಿಯ ಶಕ್ತಿಯಿಂದ ಪರಿಸ್ಥಿತಿಗಳನ್ನು ಬದಲಾಯಿಸುವ ಶಕ್ತಿ ಸ್ವರೂಪ.

6. ನಾನು "ಧೈರ್ಯದಿಂದ ಪರಿಸ್ಥಿತಿಯನ್ನು ದಾಟುತ್ತೇನೆ" ಎಂದು ತಂದೆಯ ಎದುರಿಗೆ ಪ್ರತಿಜ್ಞೆ ಮಾಡಿದ್ದೇನೆ.

7. ನಾನು ಸದ್ಗುರುವಾದ ಶಿವ ತಂದೆಯಿಂದ ಲಭಿಸಿರುವ ಶಿಕ್ಷಣವನ್ನು ಸ್ವರೂಪದಲ್ಲಿ ತಂದಿದ್ದೇನೆ.

8. ನಾನು ಅಂತಿಮ ಸ್ಥಿತಿಯ ಪ್ರಕಾರ ನನ್ನೊಳಗೆ ಕಂಡ ಲೋಪವನ್ನು ತಕ್ಷಣವೇ ತೊಲಗಿಸಿಕೊಳ್ಳುವ ಪುರುಷಾರ್ಥದ ಪ್ರೇಮಿ.

9. ನಾನು ಸಾಕಾರ ಬ್ರಹ್ಮ ಬಾಬಾ ಅವರನ್ನು ಅನುಸರಿಸುತ್ತಾ ಯಾವ ವಿಷಯವನ್ನಾದರೂ "ನಂತರ" ಎಂದು ಬಿಡುವುದಿಲ್ಲ ಈಗಲೇ ಮಾಡುತ್ತೇನೆ.

10. ನಾನು ಈ ಶರೀರದಲ್ಲಿರುವಾಗಲೇ ಸಂಪೂರ್ಣವಾಗಬೇಕು ಎಂಬ ಗುರಿಯನ್ನು ಇಟ್ಟುಕೊಂಡಿದ್ದೇನೆ.

11. ನಾನು ನನ್ನ ಕರ್ಮ ಬಂಧನಗಳನ್ನು ಯೋಗ ಶಕ್ತಿಯಿಂದ ತೊಲಗಿಸಿಕೊಂಡಿದ್ದೇನೆ.

12. ನಾನು ಸಂಗಮಯುಗದ ಪುರುಷಾರ್ಥದ ಸಮಯವನ್ನು ಸಂಪನ್ನ ಮಾಡಿಕೊಂಡಿದ್ದೇನೆ. ಒಂದೊಂದು ಕ್ಷಣ, ಒಂದೊಂದು ಶ್ವಾಸ ಸಫಲ ಮಾಡಿಕೊಂಡಿದ್ದೇನೆ.

13. ನಾನು ಪುರುಷಾರ್ಥದ ಸೌಭಾಗ್ಯ ಸಮಯದಲ್ಲಿ ಪುರುಷಾರ್ಥದೊಂದಿಗೆ ಸ್ನೇಹವನ್ನು ಇಟ್ಟುಕೊಂಡು ಪುರುಷಾರ್ಥವನ್ನು ವೃದ್ಧಿ ಮಾಡಿಕೊಳ್ಳುತ್ತಿದ್ದೇನೆ.

**ಹೆಚ್ಚಿನ ಮಾಹಿತಿಗಾಗಿ.**

1.ಮನನ-ಚಿಂತನೆ(ಮನನ ಶಕ್ತಿ) : ಅವ್ಯಕ್ತ ಮುರಳಿ (01-02-1979 - ಮನನಶಕ್ತಿಯೇ ಮಾಯಾಜಿತ್ ರಾಗುವ ಸಾಧನ.

23-12-1987 - ಮನನ ಶಕ್ತಿ ಮತ್ತು ಮಗ್ನಸ್ಥಿತಿ.

10-01-1988 - ಮನನ ಮಾಡುವ ವಿಧಿ ಮತ್ತು ಮನನ ಶಕ್ತಿಯನ್ನು ಬೆಳೆಸಿಕೊಳ್ಳುವ ಯುಕ್ತಿಗಳು.

01-04-1981 - ಮನನ ಶಕ್ತಿಯ ಮೂಲಕ ಸರ್ವಶಕ್ತಿಗಳ ಸ್ವರೂಪದ ಅನುಭೂತಿ).

2.ಅಂತರ್ಮುಖತೆ: ಅವ್ಯಕ್ತ ಮುರಳಿ (24-6-71 - ಅಂತರ್ಮುಖಿ ಆಗುವುದರಿಂದ ಲಾಭಗಳು).